MYSORE LEGISLATIVE ASSEMBLY

FIFTY-NINTH DAY.

Monday, 24th September 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Number of privately managed High Schools which were converted as Government High Schools in the State from the year 1957-58.

*Q.—202. SRI B. HUTCHE GOWDA (Turuvekere .—

Will the Government be pleased to state :—

(*a*) the number of High Schools, privately managed, which were converted as Government High Schools from 1957-58 in the State;

(*b*) the amount of local contribution given for the construction of these Schools buildings;

(*c*) the amount of grant sanctioned by Government to each such high school since it is taken over by Government;

(*d*) the strength of each such School during each year after it is taken from 1958-59 ?

A.—SRI S. R. KANTHI (Minister for Education).—

(*a*) 18.

(*b*), (*c*) and (*d*) *Vide* Statement given below.

(SRI S. R. KANTHI)

STATEMENT

Statement showing the names of High Schools which were converted as Government High Schools and other details connected with them.

Sl. No.	The names of High Schools privately managed which were converted as Government High Schools from 1957-58 in the State.	The amount of Local Contribution given for the construction of the School buildings.	The amount of grant sanctioned by Government to each such High School since it is taken over by Government.	The strength of each School during each year after it is taken from 1958-59.		
	(a)	(b)	(c)	(d)		
				1959-60	1960-61	1961-62
1	High School, Gogi, Gulbarga District	Nil	Rs. 5,000 towards equipment.	366	344	336
2	Do Shahabad, Do	A five-room building is donated by the people of Shahabad to the High School.	Do	643	835	965
3	Do Yelburga, Raichur District.	Nil	Do	18	35	46
4	Do Hanumasagar, Raichur District.	Nil	Do	321	335	437
5	Do Mudbi, Bidar District	Nil	Do	25	45	28
6	Do Nimburga, Gulbarga District.	Nil	Do	...	66	70
7	Do Gabbur, Do	Nil	Do	...	17	45

8	High School,	Nirna, Bidar District.	Nil	Do	...	41	74
9	Do	Bemalkheda, Bidar District.	Nil	Do	...	44	73
10	Do	Kanakagiri, Raichur District.	Nil	Nil	...	26	52
11	Aided High School,	Pattanayakanahalli, Tumkur District.	Nil	Nil	1959-60	1960-61	1961-62
12	Do	Besagarahalli, Mandya District.	Nil	Nil	...	...	114
13	Do	Shantigrama, Hassan District.	Nil	Nil	...	...	106
14	High School,	Yedrami, Gulbarga District.	Nil	Rs. 5,000 towards equipment	...	...	140
15	Do	Kembhavi, Gulbarga District.	A ten-room building is donated by the people of Kembhavi to the High School.	Do	...	...	54
16	Do	Kodla, Gulbarga District.	Nil	Do	...	...	40
17	Do	Gunjahalli, Raichur District.	Nil	Do	...	...	42
18	Do	Turvihal, Raichur District.	Nil	Do	...	...	50
							33

ಶ್ರೀ ಬಿ. ಹುಚ್ಚೇಗೌಡ.— ಗ್ರಾಂಟನ್ನು ತೆಗೆದು ಕೊಳ್ಳದೆ ಎಷ್ಟು ಹೈನ್ಯೂಲುಗಳು ನಡೆಯುತ್ತಿವೆ ?

†ಶ್ರೀ ಎಸ್. ಆರ್. ಕಂಠಿ.—ಹೊಸ ಶಾಲೆ ತೆಗೆಯ ಬೇಕಾದರೆ ಸರ್ಕಾರ ಜನರ ಕಡೆಯಿಂದ ಕಾಂಟ್ರಿ ಬ್ಯೂಷ್ನ್ ಕೇಳುತ್ತದೆ. ಇದ್ದ ಶಾಲೆಗಳು ಖಚಿತವಾಗಿ ಗ್ರಾಂಟನ್ನು ತೆಗೆದುಕೊಳ್ಳಬೇಕೆಂಬ ನಿರ್ಣಯವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ 15 ಶಾಲೆಗಳನ್ನು ಸರ್ಕಾರ ವಹಿಸಿಕೊಂಡು ಇತರ ಕಡೆಗಳಿಗೆ ಸಹಾಯ ಧನವನ್ನು ಕೊಡದಿರುವುದು ಪಕ್ಷಪಾತ ತೋರಿಸುವುದಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಸಂದರ್ಭ ಆ ರೀತಿ ಇಲ್ಲ ಹಳೇ ಮೈಸೂರಿನಲ್ಲೂ, ತುಮಕೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಒಂದೊಂದು ಶಾಲೆಯನ್ನು ವಹಿಸಿಕೊಂಡಿದೆ; ಶಾಂತಿಗ್ರಾಮ, ಬೆನಗರಹಳ್ಳಿ ಮತ್ತು ಪುಟ್ಟನಾಯಕನಹಳ್ಳಿ ಈ ಮೂರು ಕಡೆ ಇದ್ದ ಪ್ರೌಢಶಾಲೆಗಳನ್ನು ಸರ್ಕಾರ ವಹಿಸಿಕೊಂಡಿದೆ.

ಶ್ರೀ ಬಿ. ಹುಚ್ಚೇಗೌಡ.— ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮಾತ್ರ 15 ಶಾಲೆಗಳನ್ನು ಸರ್ಕಾರ ವಹಿಸಿಕೊಂಡು ಇತರ ಕಡೆಗಳಲ್ಲಿ ಬೇಡಿಕೆ ಯಿದ್ದರೂ ವಹಿಸಿಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಮುಂಬಯಿ ಕರ್ನಾಟಕದಲ್ಲಿ ಒಂದನ್ನೂ ತೆಗೆದುಕೊಂಡಿಲ್ಲ, ನೋಡಬಹುದು. ತಮ್ಮ ಜಿಲ್ಲೆಯಲ್ಲಿ ಒಂದನ್ನು ವಹಿಸಿಕೊಳ್ಳಲಾಗಿದೆ. ಯೋಗ್ಯವೆಂದು ಕಂಡಿರುವ ಕಡೆ ಹಾಗೆ ಮಾಡಲಾಗಿದೆ.

Sri S. SIVAPPA.—Is there any connection between the Minister coming from Hyderabad Karnatak and the granting of these Government High Schools for Hyderabad Karnatak ?

Sri S. R. KANTHI.—This is a most uncharitable remark. As Hon'ble Members know, Hyderabad Karnatak is a backward area and that is why the Minister gave so many high schools there. Even if some other person coming from some other area were to be the Education Minister, he would have done the same thing.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇತರ ಜಿಲ್ಲೆಗಳಲ್ಲಿ 30 ಸಾವಿರ ರೂಪಾಯಿಗಳನ್ನು ಕೊಡುವುದಾಗಿಯೂ, ಹೈನ್ಯೂಲುಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದೂ ಬಹಳ ದಿವಸಗಳಿಂದಲೂ ಕೇಳುತ್ತಿದ್ದರೂ ಅವನ್ನು ವಹಿಸಿಕೊಳ್ಳದೆ ಕೇವಲ ಎರಡು ವರ್ಷಗಳಲ್ಲಿ 15 ಶಾಲೆಗಳನ್ನು 2 ಜಿಲ್ಲೆಗಳಲ್ಲಿ ಮಾತ್ರ ವಹಿಸಿಕೊಳ್ಳಲು ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಹೈದರಾಬಾದ್ ಕರ್ನಾಟಕ ಆಗಲೆ ಹೇಳಿದ ಹಾಗೆ ಬಹಳ ಹಿಂದುಳಿದ ಪ್ರದೇಶ; ಆದುದರಿಂದ ಹಾಗೆ ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೈದರಾಬಾದ್ ಪ್ರದೇಶದಲ್ಲಿ ವಹಿಸಿಕೊಂಡು ಹಳೇ ಮೈಸೂರಿನಲ್ಲಿ ಬಿಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.— ಇನ್ನುಮೇಲೆ ಅಲ್ಲಿ ವಹಿಸಿಕೊಳ್ಳಬಾರದೆಂದರೆ ಬಿಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಹೈದರಾಬಾದು ಕರ್ನಾಟಕದ ಶಾಲೆಗಳಿಗೆ ಮಾತ್ರ 5 ಸಾವಿರ ರೂಪಾಯಿಗಳ ಸಹಾಯ ಧನ ಮಂಜೂರ್ಮಾಡಿ ಮಿಕ್ಕ ಮೂರು ಜಿಲ್ಲೆಗಳ 3 ಶಾಲೆಗೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—1959-60 ರಲ್ಲಿ ವಹಿಸಿಕೊಂಡಿರುವುದಕ್ಕೆ ಮಾತ್ರ ಸಹಾಯ ಧನ ಸಿಕ್ಕಿದೆ. 1960-61 ಮತ್ತು 1961-62 ರಲ್ಲಿ ವಹಿಸಿಕೊಂಡಿರುವುದಕ್ಕೆ ಸಿಕ್ಕಿಲ್ಲ.

Sri K. LAKKAPPA.—What are the main factors Government would consider to take over private high schools as Government high schools ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಪರಿಸ್ಥಿತಿ ನೋಡಿ ಸರ್ಕಾರ ನಿರ್ಣಯಿಸುತ್ತದೆ.

ಶ್ರೀಮತಿ ವಿಜಯಾ ರಾಘವೇಂದ್ರರಾವ್ ದೇಸಾಯಿ.—ಹೈದರಾಬಾದ್ ಪ್ರದೇಶದಲ್ಲಿ ಇನ್ನೂ ಕೆಲವು ಹೈನ್ಯೂಲುಗಳನ್ನು ಸರ್ಕಾರ ವಹಿಸಿಕೊಳ್ಳುವ ವಿಚಾರವೇನಾಯಿತು ?

ಶ್ರೀ ಎಸ್. ಆರ್. ಕಂಠಿ.— ನಮ್ಮ ಜೇಬಿನಲ್ಲಿ ಜಾಸ್ತಿ ಹಣವಿದ್ದರೆ ಕೊಡಬಹುದಾಗಿತ್ತು. ಆದರೆ ಜೇಬಿನಲ್ಲಿ ಏನೂ ಇಲ್ಲವಲ್ಲಾ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—18 ಪ್ರೌಢ ಶಾಲೆಗಳನ್ನು ಯಾವಾಗ ತೆಗೆದುಕೊಂಡಿರಿ ?

ಶ್ರೀ ಎಸ್. ಆರ್. ಕಂಠಿ.—1959-60 ರಲ್ಲಿ ಗೋಗಿ, ಶಹಬಾದ್, ಎಲ್ಬುರ್ಗ, ಹನುಮಸಾಗರ—ಈ ಗ್ರಾಮಗಳಲ್ಲಿದ್ದ ಶಾಲೆಗಳನ್ನು ತೆಗೆದುಕೊಳ್ಳಲಾಗಿದೆ. ಮುಡ್ಬಿ, ನಿಂಬುರ್ಗ, ಗಬ್ಬೂರು, ನಿರ್ನ, ಕನಕಗಿರಿ, ಬಿಮಳ ಖೇಡ್ಡಾ ಗ್ರಾಮಗಳ ಶಾಲೆಗಳನ್ನು 1960-61 ರಲ್ಲಿತೆಗೆದುಕೊಳ್ಳಲಾಗಿದೆ, ಮತ್ತು 1961-62 ರಲ್ಲಿ ಪಟ್ಟನಾಯಕನಹಳ್ಳಿ, ಬೆನಗರಹಳ್ಳಿ, ಶಾಂತಿಗ್ರಾಮ, ಯಡ್ರಾಮಿ, ಕೆಂಬಾವಿ, ಕೊಡ್ಲಾ, ಗುಂಜಹಳ್ಳಿ, ತುರವೆಹಾಳ್ ಗ್ರಾಮಗಳ ಶಾಲೆಗಳನ್ನು ವಹಿಸಿಕೊಳ್ಳಲಾಗಿದೆ.

ಶ್ರೀ ಎಸ್. ಶಿವಪ್ಪ.—25, 40, 42 ವಿದ್ಯಾರ್ಥಿಗಳಿರುವ ಶಾಲೆಗಳನ್ನು ವಹಿಸಿಕೊಂಡು ಜಾಸ್ತಿ ಸಂಖ್ಯೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಬಿಟ್ಟಿರುವುದು ಕೇವಲ ಮೆಹಬರ್ಬಾನಿಗಾಗಿ ಮಾಡಿರುವ ಕೆಲಸವೆಂದು ಗೊತ್ತಾಗುವುದಿಲ್ಲವೆ ?

ಶ್ರೀ ಎಸ್. ಆರ್. ಕಂಠಿ,—ಹೈದರಾಬಾದ್ ಭಾಗದಲ್ಲಿ ಸಂಖ್ಯೆ ಕಡಮೆಯಿದೆ. ಆದರೆ ಸ್ವಲ್ಪ ಸಹಾನುಭೂತಿಯಿಂದಿದ್ದರೆ ಎಲ್ಲಾ ಸರಿಹೋಗುತ್ತದೆ.

ಶ್ರೀಮತಿ ಬಸವರಾಜೇಶ್ವರಿ.—ಈ ದಿವನ ಎಷ್ಟು ಹೈನ್ಯೂಲುಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಮನವಿ ಬಂದಿದೆ ?

ಶ್ರೀ ಎಸ್. ಆರ್. ಕಂಠಿ.—ಆ ಸಮಾಚಾರ ನನ್ನಲ್ಲಿಲ್ಲ

ಶ್ರೀ ಎಸ್. ಶಿವಪ್ಪ.—ವಿದ್ಯಾರ್ಥಿಗಳು ಸಾಕಷ್ಟು ಬಾರದಿರುವ ಊರುಗಳ ಶಾಲೆಗಳನ್ನು ಸರ್ಕಾರ ವಹಿಸಿಕೊಂಡು ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳನ್ನು ಬಿಟ್ಟಿರುವುದಕ್ಕೆ ಪ್ರಬಲವಾದ ಕಾರಣವೇನಿತ್ತು ?

† Indicates that the remarks or speeches have not been revised by the member concerned

ಶ್ರೀ ಎಸ್. ಆರ್. ಕಂಠಿ.— ಎರಡ್ಲಾ ಕಡೆಯೂ ಹಾಗಿಲ್ಲ. ತುರುವೆಹಾಳ್‌ನಲ್ಲಿ 33, ಗುಂಜಹಳ್ಳಿಯಲ್ಲಿ 50, ಕೊಡ್ಲಾದಲ್ಲಿ 42 ಹೀಗೆರ್ಲಾ ಇದ್ದಾರೆ. ಇದು 1961-62 ರ ಸಂಖ್ಯೆ. ಈ ವರ್ಷ ಹೆಚ್ಚು ಮಂದಿ ಬಂದಿದ್ದಾರೆಂದು ಗೊತ್ತಾಗಿದೆ.

ಶ್ರೀ ಇ. ನಾರಾಯಣಗೌಡ.—1962ನೆಯ ಇಸವಿ ಫೆಬ್ರುವರಿ ತಿಂಗಳಿನಲ್ಲಿ 4 ಶಾಲೆಗಳನ್ನು ಒಂದೇ ತಿಂಗಳಿನಲ್ಲಿ ಕೊಟ್ಟಿರುವುದು ನಿಜವೆ?

ಶ್ರೀ ಎಸ್. ಆರ್. ಕಂಠಿ.— ಇರಬಹುದು. ಆ ತಾರೀಖು ನನ್ನಲ್ಲಿಲ್ಲ.

ಶ್ರೀ ಆರ್. ಎಂ. ದೇಸಾಯಿ.—ಉತ್ತರ ಕನ್ನಡದ ಕೆಲವು ಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಮನವಿ ಮಾಡಿರುವುದು ಗೊತ್ತಿದೆಯೇ? ಸರ್ಕಾರ ಅದಕ್ಕೆ ಮನ್ನಣೆ ಕೊಡುವುದೇ?

ಶ್ರೀ ಎಸ್. ಆರ್. ಕಂಠಿ.—ಆ ವಿಚಾರದಲ್ಲಿ ಜೇಬಿನಲ್ಲಿ ಏನೂ ಇಲ್ಲವೆಂದು ಆಗಲೇ ಉತ್ತರ ಹೇಳಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಹೈದರಾಬಾದು ಕರ್ನಾಟಕದಲ್ಲಿ ಯಾವ ಪ್ರದೇಶದಲ್ಲಿ ಸರ್ಕಾರಿ ಶಾಲೆಯಿಲ್ಲ ಎಂದು ತಿಳಿಯಲು ಮೆಷೀನರಿ ಏನಾದರೂ ಇದೆಯೆ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಪ್ರಶ್ನೆ ಹಾಕಿದವರೇ ಉತ್ತರ ಹೇಳಬೇಕು.

ಶ್ರೀಮತಿ ನುಶೀಲಾಬಾಯ್ ಹೀರಾಚಂದ್‌ಷಾ.— ಉತ್ತರ ಕರ್ನಾಟಕದಿಂದ ಈ ವಿಚಾರದಲ್ಲಿ ಬೇಡಿಕೆ ಇರುವುದನ್ನು ಗಮನಿಸುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಅಲ್ಲಿನವರೇ ನಡೆಸಲು ಸಮರ್ಥರಿದ್ದಾರೆಂಬ ಭಾವನೆಯಿದೆ. ಸರ್ಕಾರ ಸಾಧ್ಯವಿದ್ದಷ್ಟು ವಹಿಸಿಕೊಳ್ಳುತ್ತಿದೆ.

ಶ್ರೀ ಬಿ. ಹುಚ್ಚೇಗೌಡ.—ಇನ್ನು ಮುಂದಾದರೂ ಹೀಗೆ ಯಾವ ಒಂದು ಅಧಾರವೂ ಇಲ್ಲದೆ ಕೊಡುವುದಕ್ಕೆ ಬದಲು ಒಂದು ಸರ್ವೆ ಮಾಡಿ ಎಲ್ಲೆಲ್ಲಿ ಆವಶ್ಯಕತೆಯಿದೆಯೆಂಬುದನ್ನು ತಿಳಿದು ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಈಗಾಗಲೇ ಹಾಗೆ ಮಾಡುತ್ತಿದ್ದೇವೆ. ಈ ಬಗೆಗೆ ಇಷ್ಟರಲ್ಲೇ ವಿವರಗಳನ್ನು ಕೊಡುತ್ತೇನೆ. ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಜನಸಂಖ್ಯೆಗೆ ಒಂದು ಹೈಸ್ಕೂಲು ಬರುತ್ತದೆ ಎಂಬ ಬಗ್ಗೆ ವಿವರಗಳು ಬಂದಿವೆ, ಇಷ್ಟರಲ್ಲೇ, ಎಂದರೆ ಮಾನ್ಯ ಸದಸ್ಯರು ತಮ್ಮ ಊರುಗಳಿಗೆ ಹೋಗುವುದರಲ್ಲೇ ಅವರ ಕೈಗೆ ಬರುತ್ತವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ವಿದ್ಯಾಭ್ಯಾಸದ ಇರಾಖೆಯಲ್ಲಿ ಪ್ಲಾನಿಂಗ್ ಸೆಕ್ಷನ್ ಎಂದಿದೆ, ಅದರಲ್ಲಿ ಇಂಥಿಂಥ ಕಡೆ ಹೈಸ್ಕೂಲು ಕೊಡಬೇಕೆಂದು ನಿಗದಿ ಮಾಡುತ್ತಾರೆ, ಸರ್ಕಾರಿ ಹೈಸ್ಕೂಲು ಕೊಡಬೇಕಾದರೆ ಅನುಸರಿಸುವ ನೀತಿಯೇನೆಂದು ತಿಳಿಸಲು ಸಾಧ್ಯವೆ? ಈಗ ಹಳೆಯ ಮೈಸೂರಿನಲ್ಲಿ ಕೊಟ್ಟಿರತಕ್ಕ ಗ್ರಾಮಗಳು backward ಎಂದೋ ಅಥವಾ forward ಎಂದೋ?

ಶ್ರೀ ಎಸ್. ಆರ್. ಕಂಠಿ.—ಹೈಸ್ಕೂಲು ಕೊಡುವ ವಿಚಾರದಲ್ಲಿ, ಕೆಲವು ಕಡೆ 12 ಸಾವಿರ ಜನಸಂಖ್ಯೆಗೆ ಒಂದು ಹೈಸ್ಕೂಲು ಬರುತ್ತದೆ, ಕೆಲವು ಜಿಲ್ಲೆಗಳಲ್ಲಿ 16 ಅಥವಾ 17 ಸಾವಿರಕ್ಕೊಂದು ಬೀಳುತ್ತದೆ. ಮತ್ತೆ ಕೆಲವು ಜಿಲ್ಲೆಗಳಲ್ಲಿ 26 ಸಾವಿರಕ್ಕೊಂದು ಬೀಳುತ್ತದೆ. ಬಿಜಾಪುರದಂಥ ಹಿಂದುಳಿದ ಜಿಲ್ಲೆಯಲ್ಲಿ 36 ಸಾವಿರಕ್ಕೊಂದು ಬೀಳುತ್ತದೆ. ಈಗ ಸರ್ಕಾರದವರು ಎಲ್ಲಿ ಬಹಳ ಕಡಮೆ ಜನಸಂಖ್ಯೆಗೆ ಒಂದೊಂದು ಹೈಸ್ಕೂಲು ಬೀಳುತ್ತದೆಂದು ನೋಡಿ, ಎಲ್ಲಿ ಕಡಮೆ ಯಿರುತ್ತದೆಯೋ ಅಲ್ಲಿ ಹೆಚ್ಚು ಕೊಟ್ಟು ಸಮ ಮಾಡಬೇಕೆಂದು ವಿಚಾರಮಾಡಿದ್ದೇವೆ. ಆದರೆ ಒಂದು ವಿಷಯ, ಯಾವ ಕಡೆ ಜನರ ಜಾಗೃತಿಯಿದೆ ಅವರು ಮುಂದೆ ಬಂದು ಕೇಳುತ್ತಾರೆ.

ಶ್ರೀ ಡಿ. ವೆಂಕಟರಾಮಯ್ಯ.—ಒಟ್ಟು ಮೈಸೂರು ರಾಜ್ಯದಲ್ಲಿ ಎಷ್ಟು ಹೈಸ್ಕೂಲುಗಳು ಖಾಸಗಿಯವರಿಂದ ಸರ್ಕಾರಿ ಹೈಸ್ಕೂಲುಗಳು ಆಗಬೇಕೆಂದು ಮನವಿಗಳು ಬಂದಿವೆ, ಅದರಲ್ಲಿ ಕೋಲಾರ ಜಿಲ್ಲೆಯಿಂದ ಎಷ್ಟು?

ಶ್ರೀ ಎಸ್. ಆರ್. ಕಂಠಿ.—ಎಷ್ಟು ಬಂದಿದೆಯೆಂದು ಈಗ ಹೇಳುವುದಕ್ಕಾಗುವುದಿಲ್ಲ, ಕೆಲವು ಬಂದಿವೆ.

ಶ್ರೀ ಎಸ್. ಎಂ. ಕೃಷ್ಣ.—ಖಾಸಗಿಯವರಿಂದ ಸರ್ಕಾರ ವಹಿಸಿಕೊಂಡಿರುವ ಶಾಲೆಗಳಲ್ಲಿ ಉಪಾಧ್ಯಾಯರಿಗೆ ಬರಬೇಕಾದ ಪಗಾರ ಸರಿಯಾಗಿ ಬಂದಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಆ ಸಮಾಚಾರ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ.—ಜನಸಂಖ್ಯೆ ಕಡಮೆಯಿರುವುದರಿಂದ ವಿದ್ಯಾರ್ಥಿಗಳು ಕಡಮೆ ಇರುತ್ತಾರಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಕೆಲವು ಹಿಂದುಳಿದ ಪ್ರದೇಶಗಳಲ್ಲಿ ಮೊದಲು ಕಡಮೆ ವಿದ್ಯಾರ್ಥಿಗಳಿದ್ದು ಈಚೆಗೆ ಸಂಖ್ಯೆ ಜಾಸ್ತಿಯಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಕಡಮೆ ಎಂದು ನ್ಯೂಲು ಕೊಡದಿದ್ದರೆ ಆ ಪ್ರದೇಶ ಇನ್ನೂ ಹಿಂದೆ ಬೀಳುತ್ತದೆ.

ಶ್ರೀ ಎಸ್. ಭೀಮಣ್ಣ.—ಹೈದರಾಬಾದು ಪ್ರದೇಶ ಹಿಂದುಳಿದ ಪ್ರದೇಶವೆಂದು ಹೇಳಿದ್ದೀರಿ, ಅಲ್ಲಿ ಜಹಗೀರು ಮತ್ತು ಪರಗಣಗಳಲ್ಲಿ ಸ್ಕೂಲುಗಳ ಸಂಖ್ಯೆ ಬಹಳ ಕಡಮೆಯಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಜಾಹಗೀರುಗಳಲ್ಲಿ ಸ್ಕೂಲುಗಳು ಕಡಮೆ ಇವೆ, ಆ ಸ್ಥಳಗಳಿಗೆ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ.

Sri J. P. SARWESH.—Is it not the policy of Government to bring the backward areas on a par with the other parts of the State in the field of education by sanctioning more schools in those areas?

Sri S. R. KANTHI.—That is exactly the policy of Government.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1961-62ನೆಯ ಸಾಲಿನಲ್ಲಿ ಯಾವ ಯಾವ ತಾರೀಖುಗಳಲ್ಲಿ ಹೈಸ್ಕೂಲುಗಳನ್ನು ಮಂಜೂರು ಮಾಡಿದಿರಿ? ಅದರಲ್ಲಿ ರಾಜಕೀಯ ಆದಾಯ, ಎಂದರೆ, political gain ಏನಾದರೂ ನಿರೀಕ್ಷೆ ಮಾಡಿದ್ದಿರಾ?

ಶ್ರೀ ಎಸ್. ಆರ್. ಕಂಠಿ.—Political gain ಏನೂ ಇಲ್ಲ. ಹಿಂದುಳಿದ ಪ್ರದೇಶಗಳಿಗೆ ಕೊಟ್ಟಿದೆ. ಯಾವ ಯಾವ ತಾರೀಕಿನಲ್ಲಿ ಕೊಟ್ಟಿದೆಯೆಂಬುದನ್ನು ಆಮೇಲೆ ತರಿಸಿಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1961-62ರದು ಮಾತ್ರ ಕೇಳುತ್ತಿದ್ದೇನೆ. ಯಾವ ಯಾವ ಖಾಸಗಿ ಹೈಸ್ಕೂಲುಗಳನ್ನು ಸರ್ಕಾರಕ್ಕೆ ವಹಿಸಿಕೊಂಡರು? ತಾರೀಖು ಯಾವುದು, ಅದರ ಹಿಂದೆ ರಾಜಕೀಯ ವಿದೆಯೆ?

ಶ್ರೀ ಎಸ್. ಆರ್. ಕಂಠಿ.—ರಾಜಕೀಯವೇನೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ತಾರೀಖುಗಳನ್ನು ಆಮೇಲೆ ತರಿಸಿಕೊಡುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದು ಸರ್ಕಾರಿ ಹೈಸ್ಕೂಲುಗಳನ್ನು ಕೊಡತಕ್ಕ ಪ್ರಶ್ನೆ. ಬಹಳ ಹಿಂದುಳಿದ ಹೈದರಾಬಾದು ಪ್ರದೇಶಕ್ಕೆ ಕೊಟ್ಟಿದೆಯೆಂದು ಹೇಳಿದಿರಿ. ಹಿಂದುಳಿದಿರುವುದೆಂದರೆ, ಆರ್ಥಿಕ ದೃಷ್ಟಿಯಿಂದಲೆ, ಜನಸಂಖ್ಯೆ ಹೆಚ್ಚೆಂತಲೆ, ಯಾವ ಆಧಾರದ ಮೇಲೆ ಕೊಟ್ಟಿರಿ? ಅದಕ್ಕಿಂತ ಹಿಂದುಳಿದ ಪ್ರದೇಶಗಳು, ಒಂದು ಹೈಸ್ಕೂಲೂ ಇಲ್ಲದಿರುವ ಪ್ರದೇಶಗಳಿಂದ ಮನವಿಗಳು ಬಂದಿರಲಿಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಆಗಲೇ ಉತ್ತರವನ್ನು ಹೇಳಿದ್ದೇನೆ. Backward ಎಂದರೆ, educationally, socially and economically backward ಎಂದು. ಆ ಭಾಗಗಳಿಗೆ ತಾವು ಹೋಗಿ ಬಂದರೆ, ನಿಮಗೇ ಕಣ್ಣೀರು ಬರುತ್ತದೆ. ನಾನೇನು ಹೈದರಾಬಾದು ಕರ್ನಾಟಕದಿಂದ ಬಂದ ಮನುಷ್ಯನಲ್ಲವಾದರೂ ಅಲ್ಲಿನ ಪರಿಸ್ಥಿತಿ ಚೆನ್ನಾಗಿ ಗೊತ್ತಿದೆ. ನಾವೆಲ್ಲರೂ ಅಲ್ಲಿನವರನ್ನು ಸಹಾನುಭೂತಿಯಿಂದ ನೋಡಬೇಕು. ಕೊಟ್ಟಿರುವುದನ್ನು ಸರಿಯಾಗಿ ಕೊಟ್ಟಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ನನ್ನದೊಂದು point of order. ನನ್ನ ಪ್ರಶ್ನೆ ಮೊದಲು ಕೇಳಿದ್ದೇನೆ, ಆಮೇಲೆ ಕೇಳಿದವರಿಗೆ ಅವಕಾಶ ಕೊಟ್ಟಿದ್ದೀರಿ, ಇದು ಸರಿಯೆ?

Mr. SPEAKER.—There is no point of order in that.

ಶ್ರೀ ಕೆ. ಲಕ್ಕಪ್ಪ.—ಜುನಾವಣೆಗೆ ಮೂರು ತಿಂಗಳ ಹಿಂದೆ ಖಾಸಗಿ ಹೈಸ್ಕೂಲುಗಳು ಸರ್ಕಾರಿ ಹೈಸ್ಕೂಲುಗಳಾಗಿರುವುವೆಷ್ಟು?

ಶ್ರೀ ಎಸ್. ಆರ್. ಕಂಠಿ.—ಜುನಾವಣೆಯ ಮುಂದೆ ಎಂದು ಹೇಳುವುದಕ್ಕಾಗುವುದಿಲ್ಲ, ಯಾವ ಯಾವ ಶಾಲೆಗಳನ್ನು ಯಾವ ಯಾವ ತಾರೀಖಿನಲ್ಲಿ ಕೊಟ್ಟಿದ್ದಾರೆಂದು ಕೇಳಿದರೆ ಬೇಕಾದರೆ ವಿವರಗಳನ್ನು ತರಿಸಿಕೊಡುತ್ತೇನೆ.

ಶ್ರೀ ಎಸ್. ಪಿ. ಘಾಯದೆ.—ಸೂಪ ತಾಲ್ಲೂಕಿನಲ್ಲಿ ಹೈಸ್ಕೂಲಿಲ್ಲವೆಂದು ಗೊತ್ತಿದೆಯೆ?

ಶ್ರೀ ಎಸ್. ಆರ್ ಕಂಠಿ.—ಅಲ್ಲಿ ಹೈಸ್ಕೂಲು ಇಲ್ಲವೆಂಬುದು ಗೊತ್ತಿಲ್ಲ, ತಾವು ಹೇಳಿದ್ದೀರಿ; ವಿಚಾರ ಮಾಡಿ ನೋಡುತ್ತೇನೆ.

Schemes to encourage Hindi in the State.

*Q—533. Sri J. P. SARWESH (Serum).—

Will the Government be pleased to state:—

(*a*) whether Government have any schemes to encourage and promote Hindi in the State;

(*b*) if so, what they are;

(*c*) the number of High Schools in the State where Hindi is the medium of instruction;

(*d*) whether they intend to grant aid to school where the medium of instruction is in Hindi?

*A.—Sri S. R. KANTHI (Minister for Education).—

(*a*) Yes.

(*b*) Encouragement and promotion of Hindi are being carried on through Voluntary Hindi Organisations and by Government as shown below:—

1. By running free Hindi Classes for adults.

2. Free Hindi Classes for Higher examinations.

3. Starting of Hindi Libraries.

4. Translation of books from Kannada into Hindi and its printing.

5. Starting of Hindi Magazines.

6. Enacting Hindi Dramas.

7. Conducting Hindi Seminars.

8. Introducing Hindi as a subject in all the Senior Primary Schools of the State in Standards VI and VII and appointing full time and part-time Hindi Teachers.

9. Introducing Hindi as a compulsory subject in all the High Schools in Standards VIII to X.

10. By starting a Hindi Vidwan Course at Mysore and a Hindi Shikshak Training College at Gulbarga.

(*c*) Four.

(*d*) Yes, if the management satisfies the required conditions.

Sri J. P. SARWESH.—May I know when the Government will start the Hindi Vidwan course in Mysore and the Hindi Shikshak Training College at Gulbarga?

Sri S. R. KANTHI.—The Vidhwan Course has been prevalent in the Mysore Training College since a long time and the Hindi Shikshak Training College at Gulbarga was started last year.

Smt. VIJAYA RAGHAVENDRA RAO DESAI.—How many Hindi seminars have been conducted in our State since November 1956?

Sri S. R. KANTHI.—I cannot give the exact number, but some have been conducted.

ಶ್ರೀ ಎಸ್. ಸುಬ್ಬಯ್ಯನಾಯಕ್.—ಹಿಂದಿಗೆ ಉತ್ತೇಜನ ಕೊಡುವ ಮತ್ತು ಹಿಂದಿಯ ಅಭಿವೃದ್ಧಿ ಕಾರ್ಯದಲ್ಲಿ